
ಅವನ ಬಾಲ್ಯದ ಹತ್ತು ವರ್ಷ ಸ್ಲಮ್ಮಲ್ಲಿ ಕಳೆದು ಹೋಗಿದ್ದವು. ನಂತರದ ಐದು ವರ್ಷ ಶಾಲಾ ಕಾಲೇಜುಗಳ ಆಟದ ಮೈದಾನಗಳಲ್ಲಿ, ಪಾರ್ಕುಗಳಲ್ಲಿ, ದೈಹಿಕ ಶಿಕ್ಷಕರ, ಕ್ರಿಕೆಟ್ ಕೋಚ್‌ಗಳ, ಸ್ನೇಹಿತರ ಮನೆಗಳಲ್ಲಿ ಕಳೆದವು. ಎಲ್ಲರ ಮನೆಮಾತಾಗಿದ್ದ ಜೀನಿಯಸ್ ನಗರದ ಡಾರ್ಲಿಂಗ್ ಆಗಿ ಬೆಳೆದ. ಅಸಾಧಾರಣ ಪ್ರತಿಭೆಯಾಗಿದ್ದ ಅವನು ಹದಿನೈದು ವರ್ಷ ವಯಸ್ಸಾಗುವಷ್ಟರಲ್ಲಿ ಸ್ವಂತ ಪ್ರತಿಭೆ ಮತ್ತು ಪರಿಶ್ರಮದಿಂದ ಕ್ರಿಕೆಟ್ಟಲ್ಲಿ ದೇಶವನ್ನು ಪ್ರತಿನಿಧಿಸಿದ. ಕ್ರಿಕೆಟ್ ಆಟವೆಂಬುದು ಅವನ ವ್ಯಕ್ತಿತ್ವದಲ್ಲಿ ಅಂತಸ್ತವಾಗಿ ಬೆಳೆದು ಬಂದಿತ್ತು.

ಆ ವರ್ಷದ ಟಿ-20 ವಿಶ್ವಕಪ್ ಪಂದ್ಯಗಳಲ್ಲಿ ಸರಣಿಯುದ್ದಕ್ಕೂ ಜೀನಿಯಸ್ ಅದ್ಭುತವಾಗಿ ಆಡಿ ದೇಶದ ತಂಡವನ್ನು ಫೈನಲ್‌ಗೆ ತಂದು ನಿಲ್ಲಿಸಿದ. ಫೈನಲ್‌ನಲ್ಲಿ ಕ್ರಿಕೆಟ್‌ನ ಅನಿಶ್ಚಿತತೆ ಕಾಡಿತು. ತಂಡ ಸೋಲಿನ ಕಡೆ ಸಾಗಿತ್ತು. ಸೋಲೊಪ್ಪದ ಜೀನಿಯಸ್ ಕೊನೆಯ ಎಸೆತದ ತನಕ ಆಡಿದ. ಕೊನೆಯ ಎಸೆತದಲ್ಲಿ ಭಾರತ ಗೆದ್ದು ವಿಶ್ವ ಚಾಂಪಿಯನ್ ಆಗಲು ಒಂದು ರನ್ ಬೇಕಿತ್ತು. ಜೀನಿಯಸ್ 99 ರನ್ ಹೊಡೆದು ಆಡುತ್ತಿದ್ದ. ರೋಮಾಂಚನ ಮುಟ್ಟಿ ನೋಡುವಂತಿತ್ತು. ಹೃದಯ ಸಂಬಂಧಿ ರೋಗದವರು ಕಣ್ಣು ಮುಚ್ಚಿ ಎದೆ ಹಿಡಿದುಕೊಂಡು ಮೌನದಲ್ಲಿ ಮುಳುಗಿದ್ದರು. ಗೆಲುವಿನ ರನ್ ಕೊಡದೇ ಇರಲು ಕ್ಷೇತ್ರ ರಕ್ಷಕರೆಲ್ಲ ಬ್ಯಾಟರನ ಸುತ್ತುವರೆದು ನಿಂತರು. ಕೊನೆಯ ಎಸೆತ ಬಂದೇ ಬಿಟ್ಟಿತು. ಜೀನಿಯಸ್ ಆನ್‌ಸೈಡಲ್ಲಿ ಹೊಡೆಯುವಂತೆ ಮಾಡಿ ಆಫ್‌ಸೈಡಲ್ಲಿ ಹೊಡೆದ. ಚೆಂಡು ಬೌಂಡರಿ ಕಡೆಗೆ ಉರುಳತೊಡಗಿತು. ರನ್ನಿಗಾಗಿ ಓಡತೊಡಗಿದರು. ಓಡುತ್ತಿದ್ದ ಜೀನಿಯಸ್ ಇದ್ದಕ್ಕಿದ್ದಂತೆಯೇ ಎದೆ ಹಿಡಿದುಕೊಂಡು ಮುಗ್ಗರಿಸಿ ಬಿದ್ದನು. ಅವನ ಬ್ಯಾಟು ಕೈಯಿಂದ ಜಾರಿ ಕೆಳಗೆ ಬಿದ್ದಿತು. ಇತ್ತ ಫೀಲ್ಡ್ ಮಾಡಿ ಚೆಂಡನ್ನು ಬೌಲರ್ ಕಡೆಗೆ ಎಸೆದರು. ಜೀನಿಯಸ್‌ನ ರನ್ನು ಪೂರ್ಣವಾಗಲು ಒಂದು ಅಡಿಯಷ್ಟು ಅಂತರವಿತ್ತು. ಜೀನಿಯಸ್‌ಗೆ ಎಚ್ಚರವಿರುವ ಹಾಗೆ ಕಾಣುತ್ತಿರಲಿಲ್ಲ. ಜನರ ಕೂಗು ಅಬ್ಬರ ಮುಗಿಲು ಮುಟ್ಟಿತು. ಅರೆ ಎಚ್ಚರದಲ್ಲಿ ಜೀನಿಯಸ್ ತೆವಳಿ ತನ್ನ ಕಾಲನ್ನು ಉದ್ದಕ್ಕೆ ಚಾಚಿದ. ಅವನ ಬೂಟು ಕ್ರೀಸಿನ ಒಳಕ್ಕೆ ಸರಿಯುವುದಕ್ಕೂ ಬೀಸಿ ಬಂದ ಚೆಂಡು ವಿಕೆಟ್‌ಗೆ ಬಡಿಯುವುದಕ್ಕೂ ಒಂದು ಸೆಕೆಂಡಿನಷ್ಟೂ ತಡವಾಗಿರಲಾರದು. ಭಾರತ ಗೆದ್ದು ವಿಶ್ವ ಚಾಂಪಿಯನ್ ಆಯಿತು. ಜೀನಿಯಸ್‌ನ ಶತಕವೂ ಆಯಿತು. ಆದರೆ ಜೀನಿಯಸ್ ಪಿಚ್ ಮೇಲೆಯೇ ಕೊನೆಯುಸಿರೆಳೆದಿದ್ದ.



ಆರೋಗ್ಯ ಉಕ್ಕುತ್ತಿದ್ದ ಉಕ್ಕಿನ ದೇಹದ ಆಟಗಾರ ನೋಡುನೋಡುತ್ತಿದ್ದಂತೆ ಸತ್ತೇ ಹೋಗಿದ್ದು ಜನರನ್ನು ದುಃಖಿತರನ್ನಷ್ಟೇ ಅಲ್ಲದೆ ಭಯಭೀತರನ್ನಾಗಿಸಿತು. ಇಡೀ ನಗರ ಸಂಭ್ರಮಾಚರಣೆ ಬಿಟ್ಟು ಶೋಕಾಚರಣೆಯಲ್ಲಿ ಮುಳುಗಿತು. ಎಲ್ಲ ಗುಡಿ ಚರ್ಚು ಮಸೀದಿಗಳಲ್ಲಿ ಪ್ರಾರ್ಥನೆಗಳು ನಡೆದವು. ನಗರಕ್ಕೆ ನಗರವೇ ಪುತ್ರವಿಯೋಗದ ದುಃಖದಲ್ಲಿತ್ತು. ಇದಾದ ಒಂದೆರಡು ದಿನದಲ್ಲಿ ಪ್ರವಾದಿ ಕೇಂದ್ರದಿಂದ ಬಂದ ಸುದ್ದಿಯಿಂದ ಜನರು ಅವಾಕ್ಕಾದರು. ಜನ ಲಕ್ಷ ಲಕ್ಷ ಸಂಖ್ಯೆಯಲ್ಲಿ ಪ್ರವಾದಿಗಳ ಅಭಿಮಾನಿಗಳಾಗಿ, ಹಿಂಬಾಲಕರಾಗಿ, ಭಕ್ತರಾಗಿ ಮಾರ್ಪಾಟಾಗಲು ಇದು ಕಾರಣವಾಯಿತು.

ಪ್ರವಾದಿಗಳು ಅಪರೂಪಕ್ಕೊಮ್ಮೆ ದರ್ಶನ ನೀಡುತ್ತಿದ್ದರೇ ವಿನಹ ಪದೇ ಪದೇ ಕಾಣಿಸಿಕೊಂಡು ಸದರವಾಗುತ್ತಿರಲಿಲ್ಲ. ಅಪರೂಪವಾದಷ್ಟೂ ಅವರ ಘನತೆ ಹೆಚ್ಚತೊಡಗಿತು. ಪ್ರವಾದಿಗಳು